ಸಾಕ್ಷಿಯನ್ನು ದಿನಾಂಕ 17-09-2022 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಅರ್ಜಿದಾರನ ಪರ ವಕೀಲರಿಂದ :**

ನನ್ನ ಮುಖ್ಯ ವಿಚಾರಣೆಗಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ.

ಐದು ಅವಾರ್ಡ್ ತಿಳುವಳಿಕೆಗಳನ್ನು ನಿಪಿ-1 ರಿಂದ 5 ಎಂದು, 5 ಪಹಣಿ ಪತ್ರಿಕೆಯನ್ನು ನಿಪಿ-6 ರಿಂದ 10 ಎಂದು, ಮೂರು ಮ್ಯುಟೇಷನ್ ಪ್ರತಿಗಳನ್ನು ನಿಪಿ-11 ರಿಂದ 13 ಎಂದು, ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನೆಗಳನ್ನು ನಿಪಿ-14 ಮತ್ತು 15 ಎಂದು, ನಗರ ಮತ್ತು ಗ್ರಾಮಾಂತರ ಇಲಾಖೆಯವರು ನೀಡಿರುವ ನಿರಾಕ್ಷೇಪಣಾ ಪತ್ರವನ್ನು ನಿಪಿ-16 ಎಂದು, ವಿಜಯಕರ್ನಾಟಕ ದಿನಪತ್ರಿಕೆಯಲ್ಲಿ ನೀಡಿರುವ ಅಧಿಸೂಚನೆಯನ್ನು ನಿಪಿ-17 ಎಂದು, ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ನಂ. 3201/2017 ರಲ್ಲಿ ಆಗಿರುವ ಆದೇಶದ ಪ್ರತಿಯನ್ನು ನಿಪಿ-18 ಎಂದು, ಜಿಲ್ಲಾಧಿಕಾರಿಗಳು ನೀಡಿರುವ ಪತ್ರದ ಪ್ರತಿಯನ್ನು ನಿಪಿ-19 ಎಂದು, ಜಿಲ್ಲಾಧಿಕಾರಿಗಳು ನೀಡಿರುವ ಹಿಂಬರಹವನ್ನು ನಿಪಿ-20 ಎಂದು, ಸರ್ಕಾರದ ನೋಟಿಫಿಕೇಶನ್ನು ನಿಪಿ-21 ಎಂದು, ಭೂಸ್ವಾಧೀನಾಧಿಕಾರಿಗಳು ನೀಡಿರುವ ಹಿಂಬರಹವನ್ನು ನಿಪಿ-22 ಎಂದು, ನಿವೇಶನಗಳಿಗೆ ಸಂಬಂಧಿಸಿದಂತೆ ನಕ್ಷೆಯನ್ನು ನಿಪಿ-23 ಎಂದು, ನಿವೇಶನಗಳಿಗೆ ಸಂಬಂಧಿಸಿದಂತೆ ಎರಡು ಕ್ರಯಪತ್ರಗಳನ್ನು ನಿಪಿ-24 ಮತ್ತು 25 ಎಂದು, ರಿಟ್ ಅರ್ಜಿಯ ಪ್ರತಿಯನ್ನು ನಿಪಿ-26 ಎಂದು ಗುರುತಿಸಲಾಯಿತು.

(ಜಿಲ್ಲಾ ಸರ್ಕಾರಿ ವಕೀಲರು ಪಾಟೀಸವಾಲು ಮಾಡಲು ಕಾಲಾವಕಾಶ ಕೋರಿದರು. ನೀಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

1 ನೇ ಅಧಿಕ ಜಿಲ್ಲಾ ನ್ಯಾಯಾಧೀಶರು,
ತುಮಕೂರು.